# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 157 | Pages. 2 | Date: 26-04-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 157 - ಪುಟಗಳು : 2 - 26 ಏಪ್ರಿಲ್ 2025 ಶನಿವಾರ Ph: 8762954248 ದರ : ₹1


# ಕಾಡಾನೆಗೆ ವರ್ಷದ ಐದನೇ ಬಲಿ!

## ಕಾಫಿ ತೋಟದ ಮಾಲೀಕನನ್ನು ಹೊಸಕಿ ಕೊಂದ ಕಾಡಾನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಬೈಕೆರೆ ಗ್ರಾಮದಲ್ಲಿ ಶುಕ್ರವಾರ ಕಾಡಾನೆ ದಾಳಿಗೆ ಕಾಫಿ ಬೆಳೆಗಾರರೊಬ್ಬರು ಮೃತಪಟ್ಟಿದ್ದಾರೆ. ಇದು ಈ ವರ್ಷ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಮಾನವ ಬಲಿಯಾದ ಐದನೇ ಪ್ರಕರಣವಾಗಿದೆ.

ಬೈಕರೆ ಗ್ರಾಮದ ಷಣ್ಮುಖ (43) ಮೃತ ವ್ಯಕ್ತಿ. ಬೆಳಿಗ್ಗೆ 9 ಗಂಟೆಗೆ ಕಾಫಿ ತೋಟಕ್ಕೆ ತೆರಳಿದ್ದ ವೇಳೆ ಕಾಡಾನೆ ದಾಳಿ ನಡೆಸಿ ತಲೆಯ ಮೇಲೆ ಕಾಲಿಟ್ಟು ಕೊಂದಿದೆ.

ಮಾಮೂಲಿ ಸಮಯಕ್ಕೆ ಅವರು ಮನೆಗೆ ಬಾರದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಮೊಬೈಲ್‌ಗೆ ಕರೆಮಾಡಿದ್ದರು. ಆದರೆ, ಅವರು ಕರೆ ಸ್ವೀಕರಿಸದ ಕಾರಣ ಕುಟುಂಬದ ಸದಸ್ಯರು ಮಧ್ಯಾಹ್ನ ಅವರನ್ನು ಹುಡುಕಿಕೊಂಡು ಕಾಫಿ ತೋಟಕ್ಕೆ ಬಂದಾಗ ಕಾಡಾನೆ ದಾಳಿ ನಡೆಸಿ ಅವರನ್ನು ಕೊಂದಿರುವ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸುತ್ತಲಿನ ಗ್ರಾಮಸ್ಥರು ಸ್ಥಳಕ್ಕೆ ಬಂದ ಡಿಎಫ್‌ಒ ಸೌರಭಕುಮಾರ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಸ್ಥಳಕ್ಕೆ ಅರಣ್ಯ ಸಚಿವರನ್ನು ಕರೆಸ ಬೇಕು ಅದುವರೆಗೆ ಮೃತದೇಹವನ್ನು ಸ್ಥಳದಿಂದ ಕದಲಿಸಲು ಬಿಡುವುದಿಲ್ಲ. ಘಟನೆಗೆ ಅರಣ್ಯ ಇಲಾಖೆಯ ವೈಫಲ್ಯವೇ ಕಾರಣ. ಆನೆಗಳ ಸಂಚಾರದ ಬಗ್ಗೆ ಕಾಡಾನೆ ಕಾರ್ಯ ಪಡೆ ನಿಖರವಾಗಿ ಮಾಹಿತಿ ನೀಡದಿರುವುದು ಘಟನೆಗೆ ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



> ಕಾಡಾನೆ ಹಾವಳಿಗೆ ರೈತರು, ಕಾಫಿ ಬೆಳೆಗಾರರು ತಮ್ಮ ಪ್ರಾಣ, ಆಸ್ತಿ-ಪಾಸ್ತಿ ಹಾಗೂ ಬೆಳೆಯನ್ನು ಕಳೆದುಕೊಂಡು ಕಂಗಾಲಾಗಿದ್ದಾರೆ. ಸರ್ಕಾರ ಕೇವಲ ಆಶ್ವಾಸನೆ ನೀಡುವುದರಿಂದ ಪ್ರಯೋಜನವಿಲ್ಲ. ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ಸಿಗಬೇಕು. ಗ್ಯಾರಂಟಿ ಯೋಜನೆಗಳಿಗೆ ಹೇಗೆ ಹಣ ನೀಡುತ್ತಿದ್ದಾರೋ ಅದೇ ರೀತಿ ಕಾಡಾನೆ ಸಮಸ್ಯೆಗೆ ಹಣ ಮೀಸಲಿಟ್ಟು ತ್ವರಿತವಾಗಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಬೇಕು.
>
> **– ಸಿಮೆಂಟ್ ಮಂಜು, ಶಾಸಕ**

### ಪ್ರತಿಭಟನಾಕಾರರ ಮನವೊಲಿಸಿದ ಸಂಸದ

ಪ್ರತಿಭಟನಾಕಾರರ ಬೇಡಿಕೆಗಳನ್ನು ಈಡೇರಿಸುವ ಭರವಸೆಯೊಂದಿಗೆ ಸಂಸದ ಶ್ರೇಯಸ್‌ಪಟೇಲ್ ಜನರನ್ನು ಸಮಾಧಾನಪಡಿಸುವಲ್ಲಿ ಯಶಸ್ವಿಯಾದರು.

ಪ್ರತಿಭಟನಾಕಾರರು, ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ಅರಣ್ಯ ಸಚಿವರು ಹಾಸನಕ್ಕೆ ಭೇಟಿ ನೀಡಿ ಕಾಡಾನೆ ಪೀಡಿತ ಪ್ರದೇಶದ ಜನರೊಂದಿಗೆ ಸಭೆ ನಡೆಸಬೇಕು, ಕೂಡಲೇ ಪುಂಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆ ಆರಂಭಿಸಬೇಕು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಮೃತರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ಒತ್ತಾಯಿಸಿದ್ದರು.

ಆದರೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಆರೋಗ್ಯ ಸಮಸ್ಯೆ ಇರುವ ಕಾರಣ, ಸಂಸದ ಶ್ರೇಯಸ್‌ಪಟೇಲ್ ತಾವೇ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಾಗಿ ತಿಳಿಸಿದರು.

ಜತೆಗೆ, ಒಂದು ವಾರದೊಳಗೆ ಅರಣ್ಯ ಸಚಿವರು



ಸಭೆ ನಡೆಸಲಿದ್ದಾರೆ ಮತ್ತು ನಾಳೆಯಿಂದಲೇ ಕಾಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲು ಅರಣ್ಯ ಸಚಿವರು ಸೂಚನೆ ನೀಡಿದ್ದಾರೆ ಎಂದು ಭರವಸೆ ನೀಡಿದರು.

ಸಂಸದರ ಈ ಭರವಸೆಯ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ತಮ್ಮ ಹೋರಾಟ ಹಿಂಪಡೆದರು. ಮೃತದೇಹವನ್ನು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ.



- **ಬೀಟಮ್ಮ ಗ್ಯಾಂಗ್ ಸೆರೆಗೆ ಜನರ ಒತ್ತಾಯ**
- **ಅರಣ್ಯ ಅಧಿಕಾರಿಗಳಿಗೆ ತರಾಟೆ**
- **ಈಶ್ವರ ಖಂಡ್ರೆ ಆಗಮನಕ್ಕೆ ಪಟ್ಟು**

ಮುಂದಿನ ಮೂರು ದಿನಗಳಲ್ಲಿ ಅರಣ್ಯ ಸಚಿವರು ಸ್ಥಳಕ್ಕಾಮಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಲಿದ್ದಾರೆ ಎಂಬ ಅಧಿಕಾರಿಗಳ ಮಾತಿಗೆ ಕಿವಿಗೊಡದ ಉದ್ರಿಕ್ತ ಜನರು ಅರಣ್ಯ ಸಚಿವರು ಇಂದೇ ಸ್ಥಳಕ್ಕಾಮಿಸಿ ಹತ್ಯೆ ನಡೆಸಿರುವ ಬೀಟಮ್ಮ ಗುಂಪಿನ ಎಲ್ಲ ಕಾಡಾನೆಗಳ ಸೆರೆಹಿಡಿಯುವ ಭರವಸೆ ನೀಡುವವರಗೂ ಪ್ರತಿಭಟನೆ ಹಿಂದೆ ಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು.

ಮೃತ ವ್ಯಕ್ತಿಯ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು ನೆರೆದಿದ್ದವರ ಕಣ್ಣಾಲೆಗಳು ತೇವಗೊಳ್ಳುವಂತೆ ಮಾಡಿತು.

ಶಾಸಕ ಸಿಮೆಂಟ್ ಮಂಜು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ದೂರವಾಣಿ ಕರೆ ಮಾಡಿ ವಾಸ್ತವ ಸ್ಥಿತಿ ವಿವರಿಸಿದರು. ಸಂಸದ ಶ್ರೇಯಸ್ ಪಟೇಲ್ ಸ್ಥಳಕ್ಕೆ ಆಗಮಿಸಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಒಂದೆಡೆ ಮೃತದೇಹದ ಸಮೀಪ ಜನರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರೆ ಮತ್ತೊಂದು ಯುವಕರ ಗುಂಪು ಬೇಲೂರು-ಸಕಲೇಶಪುರ ರಾಜ್ಯ ಹೆದ್ದಾರಿ ಸಂಚಾರ ತಡೆದು ಪ್ರತಿಭಟಿಸಿ ಕಾಡಾನೆ ಹಾವಳಿಗೆ ಶಾಶ್ವತ ಪರಿಹಾರ ರೂಪಿಸಬೇಕು ಎಂದು ಆಗ್ರಹಿಸಿದರು.

# ಪ್ರಧಾನಿ ಮೋದಿ ಉಗ್ರರ ಸದೆ ಬಡಿಯಲಿ



ಹಾಸನ: ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಪ್ರವಾಸಿಗರ ಹತ್ಯೆಗೈದ ಉಗ್ರರನ್ನು ಪ್ರಧಾನಿ ನರೇಂದ್ರ ಮೋದಿ ಸುಮ್ಮನೆ ಬಿಡಬಾರದು ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲಕ್ಷ್ಮಣ್ ಆಗ್ರಹಿಸಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ಖಂಡಿಸಿ ಶುಕ್ರವಾರ ಜಿಲ್ಲಾ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಭಾರತ ಯಾವತ್ತಿಗೂ ಶಾಂತಿ ಬಯಸುತ್ತದೆ. ಪಾಕಿಸ್ತಾನ ಭಾರತದೊಂದಿಗೆ ಯಾವಾಗಲೂ ದ್ವೇಷ ಸಾಧಿಸುತ್ತಿದ್ದು ಪ್ರವಾಸಕ್ಕೆ ತೆರಳಿದ್ದ 26 ಪ್ರವಾಸಿಗರನ್ನು ಉಗ್ರರು ಗುಂಡಿಕ್ಕಿ ಕೊಂದಿದ್ದಾರೆ. ಈ ಘಟನೆಯನ್ನು ಕಾಂಗ್ರೆಸ್ ಖಂಡಿಸುತ್ತದೆ. ದೇಶದ ಭದ್ರತೆ ವಿಚಾರದಲ್ಲಿ ಕಾಂಗ್ರೆಸ್ ಯಾವತ್ತೂ ರಾಜಕಾರಣ ಮಾಡುವುದಿಲ್ಲ. ಉಗ್ರರ ಮಟ್ಟ ಹಾಕುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಕೈಗೊಳ್ಳುವ ನಿರ್ಧಾರಕ್ಕೆ ಕಾಂಗ್ರೆಸ್ ಬೆಂಬಲಿಸುತ್ತದೆ ಎಂದರು.

ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಯಾವ ಕಾರಣಕ್ಕೂ ಉಗ್ರರನ್ನು ಸುಮ್ಮನೆ ಬಿಡಬಾರದು. ನಮ್ಮವರನ್ನು ಕೊಂದವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು.

ನಗರದ ಹೇಮಾವತಿ ಪ್ರತಿಮೆಯಿಂದ ಮೇಣದ ಬತ್ತಿ ಮೆರವಣಿಗೆ ನಡೆಸಿದ ಕಾರ್ಯಕರ್ತರು ಎನ್‌ಆರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಉಗ್ರ ದಾಳಿಯನ್ನು ಖಂಡಿಸಿದರು.

ಕಾಂಗ್ರೆಸ್ ಮುಖಂಡರಾದ ಗ್ರಾನೈಟ್ ರಾಜಶೇಖರ್, ಜೆಸಿಬಿ ಚಂದ್ರು, ರಘು ದಾಸರಕೊಪ್ಪಲು, ಮಂಜುನಾಥ ಶರ್ಮಾ, ತಾರಾ ಚಂದನ್ ಹಾಗೂ ಇತರರು ಹಾಜರಿದ್ದರು.

# ವಿವಿಗಳಿಗೆ ಅನುದಾನ ನೀಡಲು ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನ ಸೇರಿದಂತೆ ಕರ್ನಾಟಕದ ಎಲ್ಲಾ ವಿಶ್ವ ವಿವಿಗಳು ಆರ್ಥಿಕ ಸಂಕಷ್ಟ ಮತ್ತು ಮೂಲಭೂತ ಸೌಕರ್ಯದ ಸಮಸ್ಯೆ ಅನುಭವಿಸುತ್ತಿದ್ದು, ಸರ್ಕಾರ ಕೂಡಲೇ ಅಗತ್ಯ ಅನುದಾನ ಬಿಡುಗಡೆ ಮಾಡಲು ಒತ್ತಾಯಿಸಿ ಹೋರಾಟ ರೂಪಿಸಲಾಗುತ್ತಿದೆ ಎಂದು ಕದಂಬಸೇನೆ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ತಿಳಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉನ್ನತ ಶಿಕ್ಷಣ ನೀಡುವ ವಿವಿಗಳು ಬಡವಾಗಿ ಶೈಕ್ಷಣಿಕ ಅಭಿವೃದ್ಧಿಗೆ ಮಾರಕವಾಗಬಾರದು. ಈ ಸಂಬಂಧ ಮುಖ್ಯಮಂತ್ರಿ





ಸಿದ್ದರಾಮಯ್ಯ ಅವರಿಗೆ ಹಲವು ಕನ್ನಡಪರ, ರೈತ ಸಂಘಟನೆಗಳು ಸೇರಿ ಮೇ ಮೊದಲ ವಾರದಲ್ಲಿ ಮನವಿ ಸಲ್ಲಿಸಲಾಗುವುದು ಎಂದರು.

ಪ್ರತಿಷ್ಠಿತ ಮೈಸೂರು, ಧಾರವಾಡ, ಬೆಂಗಳೂರು ಜ್ಞಾನ ಗಂಗೋತ್ರಿ ಸೇರಿದಂತೆ ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಿಗೆ ಅನುದಾನ ಇಲ್ಲ, ಗ್ಯಾರಂಟಿ ಯೋಜನೆಗಳಿಗೆ

ಖಜಾನೆಯಲ್ಲಿ ಹಣ ಇದ್ದು, ಶೈಕ್ಷಣಿಕ ವಿಚಾರಕ್ಕೆ ಅನುದಾನ ಇಲ್ಲವಾಗಿದೆ ಎಂದು ದೂರಿದರು.

ಅಂಬೇಡ್ಕರ್ ವಿರಚಿತ ಸಂವಿಧಾನದಲ್ಲಿ ಆರೋಗ್ಯ ಮತ್ತು ಶಿಕ್ಷಣವನ್ನು ಉಚಿತವಾಗಿ ನೀಡಬೇಕು ಎಂದಿದೆ.

ಆದರೆ ಆಳುವ ಸರ್ಕಾರಗಳು ಎಲ್ಲದಕ್ಕೂ ಹಣ ಪಡೆಯುತ್ತಿದ್ದರೂ ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂದು ಅಸಮಾಧಾನ ಹೊರ ಹಾಕಿದರು. ಎಲ್ಲ ವಿವಿಗಳಲ್ಲೂ ಅನುದಾನದ ಕೊರತೆ ಒಂದೆಡೆಯಾದರೆ, ಬೋಧಕ-ಬೋಧಕೇತರ ಸಿಬ್ಬಂದಿ ನೇಮಕ ಆಗಿಲ್ಲ.

ಎಲ್ಲವನ್ನೂ ಅತಿಥಿ ಉಪನ್ಯಾಸಕರೇ ನಿರ್ವಹಿಸಬೇಕಿದೆ. ಇದು ಹೀಗೆಯೇ ಮುಂದುವರಿದರೆ ಮುಂದಿನ ಯುವಪೀಳಿಗೆಗೆ ಉನ್ನತ ಶಿಕ್ಷಣ ಕಲಿಸುವವರೇ ಇಲ್ಲದಂತಾಗುತ್ತದೆ ಎಂದು ಕಳವಳ ಹೊರ ಹಾಕಿದರು. ದೇಶ, ಸಮಾಜದ ಬೆಳವಣಿಗೆಗೆ ಶಿಕ್ಷಣ, ಸಾಕ್ಷರತೆ ಬಹಳ ಪ್ರಮುಖವಾದುದು, ಹಾಗಾಗಿ ವಿವಿಗಳ ಆಂತರಿಕ ಆದಾಯದ ಜೊತೆಗೆ ರಾಜ್ಯ ಸರ್ಕಾರ ಪ್ರತಿ ವರ್ಷ ನಿರ್ದಿಷ್ಟ ಅನುದಾನ ನೀಡಬೇಕು. ಆದರೆ ಪಕ್ಷಾತೀತವಾಗಿ ಎಲ್ಲಾ ಸರ್ಕಾರಗಳು ವಿವಿಗಳ ಬಗ್ಗೆ ತಾತ್ಸಾರ, ಅಸಡ್ಡೆ ತೋರಿ ಹಣ ಬಿಡುಗಡೆ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

# ಪಹಲ್ಗಾಮ್ ದಾಳಿ: ಸಂಘಟಿತ ಹೋರಾಟಕ್ಕೆ ಕರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಕಾಶ್ಮೀರದ ಪಹಲ್ಗಾವ್ ಮತ್ತು ಪಶ್ಚಿಮ ಬಂಗಾಳದಲ್ಲಿ ಪಾಕ್ ಕುಮ್ಮಕ್ಕಿನಿಂದ ಹಿಂದೂಗಳ ಮೇಲೆ ನಡೆಯುತ್ತಿರುವ ಹತ್ಯಾಕಾಂಡ, ದೌರ್ಜನ್ಯದ ವಿರುದ್ಧ ಹಿಂದೂಗಳು ಸಂಘಟಿತರಾಗಿ ಒಗ್ಗಟ್ಟಿನಿಂದ ಹೋರಾಡಬೇಕಿದೆ ಎಂದು ಹಿಂದೂ ಹಿತರಕ್ಷಣಾ ಸಮಿತಿ ಮುಖಂಡ ಹೊ. ಸು.ರಮೇಶ್ ತಿಳಿಸಿದರು.

ಪಟ್ಟಣದಲ್ಲಿಂದು ಹಿಂದೂ ಹಿತರಕ್ಷಣಾ ಸಮಿತಿ ಮತ್ತು ವಿವಿಧ ಕನ್ನಡಪರ ಸಂಘಟನೆಗಳು ಹಮ್ಮಿಕೊಂಡಿದ್ದ ಪ್ರತಿಭಟನೆ ನೇತೃತ್ವ ವಹಿಸಿ ಮಹಾತ್ಮಾಗಾಂಧಿ ಪ್ರತಿಮೆ ಬಳಿ ಅವರು ಮಾತನಾಡಿದರು.

ಪ್ರವಾಸಿಗರ ಧರ್ಮ, ಜಾತಿ



ಯಾವುದೆಂದು ಹತ್ಯೆ ಮಾಡಿದ ಉಗ್ರವಾದಿಗಳ ಭಯೋತ್ಪಾದನಾ ಕೃತ್ಯ ಖಂಡನೀಯ, ಕಾಶ್ಮೀರದಲ್ಲಿ ಪ್ರಜಾಪ್ರಭುತ್ವ ನೆಲೆಸಿ ನಾಗರಿಕ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಅಲ್ಲಿ ಶಾಂತಿ ನೆಲೆಸಿ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತಿದೆ.

ಅಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದೆ. ಇದನ್ನು ಸಹಿಸದ ಪಾಪಿಗಳು ಉಗ್ರವಾದಕ್ಕೆ ಕುಮ್ಮಕ್ಕು ನೀಡುತ್ತಿರುವುದು ಖಂಡನೀಯ. ಈ ವೇಳೆ ಭಾರತದ ಹಿಂದೂ-ಮುಸ್ಲಿಂ ಸಮುದಾಯದವರು ಒಗ್ಗಟ್ಟಿನ ಪ್ರದರ್ಶನ ಮಾಡಿ ನಮ್ಮ ಸೈನಿಕರು ಹಾಗೂ ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡುವ ಅವಶ್ಯಕತೆ ಇದೆ ಎಂದರು.

ಉಗ್ರವಾದ ಮತ್ತು ಭಯೋತ್ಪಾದನೆಯನ್ನು ಬೇರು ಸಮೇತ ನಿರ್ಮೂಲನೆ ಮಾಡುವ ಸೈನಿಕರು, ಸರ್ಕಾರದ ಜೊತೆ ನಾವು ನಿಲ್ಲಬೇಕು. ಹಿಂದೂಗಳು ಒಗ್ಗಟ್ಟಾಗದಿದ್ದರೆ ಭಯೋತ್ಪಾದನಾ ಕೃತ್ಯ ಎಲ್ಲಿ ಬೇಕಾದರೂ ನಡೆಯುತ್ತದೆ ಎಂದರು.

ಭಯೋತ್ಪಾದಕರಿಗೆ, ಉಗ್ರವಾದಿಗಳಿಗೆ ಬೆಂಬಲ ನೀಡುವ ದೇಶದ ಒಳಗಿನ ಮತ್ತು ಹೊರಗಿನ ಶತ್ರುಗಳ ನಿರ್ನಾಮ ಮಾಡಲು ಕೇಂದ್ರ ಕಠಿಣ ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ ಎಂದರು. ಬೆಳಿಗ್ಗೆ 10.30 ಕ್ಕೆ ಚೆನ್ನಾಂಬಿಕಾ ವೃತ್ತದಿಂದ ಹೊರಟ ಪ್ರತಿಭಟನಾಕಾರರು, ಉಗ್ರವಾದ ಮತ್ತು ಭಯೋತ್ಪಾದನಾ ಕೃತ್ಯದ ವಿರುದ್ಧ ಭಿತ್ತಿ ಚಿತ್ರ ಹಿಡಿದು ಘೋಷಣೆ ಕೂಗುತ್ತಾ ಪೇಟೆ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಬಂದು ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಮೂಲಕ ಮಹಾತ್ಮಾಗಾಂಧಿ ಪ್ರತಿಮೆ ಮುಂದೆ ಸಮಾವೇಶಗೊಂಡರು.

# ವಿದ್ಯುತ್ ಆಘಾತ ಪ್ರಕರಣ ಶಾಸಕ ಸ್ವರೂಪ್ ಸಾಂತ್ವನ



ಹಾಸನ: ಇತ್ತೀಚೆಗೆ ವಿದ್ಯುತ್ ತಂತಿ ತುಳಿದು ಮೃತಪಟ್ಟ ನಗರದ ಬಿ.ಟಿ ಕೊಪ್ಪಲಿನ ನಂದೀಶ್ ಅವರ ನಿವಾಸಕ್ಕೆ ಇಂದು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಕೆಎಸ್‌ಆರ್‌ಟಿಸಿ ನೌಕರರಾಗಿದ್ದ ನಂದೀಶ್, ಬೆಳಗ್ಗೆ ವಾಕಿಂಗ್ ಮಾಡುವ ವೇಳೆ ಆಕಸ್ಮಿಕವಾಗಿ ವಿದ್ಯುತ್ ತಂತಿ ತುಳಿದು ಮೃತಪಟ್ಟಿದ್ದರು. ಇಂದು ನಗರಸಭೆ ಸದಸ್ಯ ವಾಸುದೇವ್ ಅವರೊಂದಿಗೆ ಭೇಟಿ ನೀಡಿದ ಶಾಸಕರು ಸಮಸ್ಯೆ ಆಲಿಸಿದರು.

ಈ ವೇಳೆ ಕುಟುಂಬದ ಸದಸ್ಯರು ಈ ದುರಂತ ನಡೆಯಲು ಸೆಸ್ಕಾಂ ಅಧಿಕಾರಿಗಳೇ ಕಾರಣ, ಕಂಬ ಮುರಿದು ಬೀಳುವ ಸ್ಥಿತಿಯಲ್ಲಿರುವ ಬಗ್ಗೆ, ವಿದ್ಯುತ್ ತಂತಿ ತುಂಡಾಗಿ ಬಿದ್ದಿದೆ ಎಂದು ಹಲವು ಬಾರಿ ದೂರು ನೀಡಿದರೂ, ಅಧಿಕಾರಿಗಳು ಎಚ್ಚೆತ್ತುಕೊಳ್ಳದೇ ಇದ್ದುದರಿಂದ

ಈ ಅವಘಡ ನಡೆದಿದೆ ಎಂದು ಅಳಲು ತೋಡಿಕೊಂಡರು.

ಬಳಿಕ ಮೃತರ ನಿವಾಸಕ್ಕೆ ಸೆಸ್ಕ್ ಅಧಿಕಾರಿಗಳನ್ನು ಕರೆಸಿದ ಸ್ವರೂಪ್, ಅವಘಡ ಘಟಿಸಲು ಕಾರಣದ ಬಗ್ಗೆ ಮಾಹಿತಿ ಪಡೆದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ತೀವ್ರ ತರಾಟೆಗೆ ತೆಗೆದುಕೊಂಡರು. ವಿದ್ಯುತ್ ತಂತಿ ಅಪಾಯದ ಮುನ್ಸೂಚನೆ ನೀಡುತ್ತಿದ್ದರೂ ಎಚ್ಚೆತ್ತುಕೊಳ್ಳದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಮುಂದೆ ಈ ರೀತಿಯ ಅವಘಡ ನಡೆದರೆ ತಮ್ಮ ವಿರುದ್ಧ ಕ್ರಮ ಜರುಗಿಸಲಾಗುವುದು, ಅನಾಹುತ ನಡೆಯಲು ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ, ಇದರ ಹೊಣೆ ನೀವೇ ಹೊರಬೇಕು. ಕುಟುಂಬಕ್ಕೆ ಆಧಾರವಾಗಿದ್ದ ಆನಂದ್ ಅವರ ಸಾವಿಗೆ ನೀವೇ ಕಾರಣ ಎಂದು ಶಾಸಕರು ಬೇಸರ ಹೊರ ಹಾಕಿದರು.

# ಹೊಂಗೆರೆಯಲ್ಲಿ ವಿಗ್ರಹ ಪ್ರತಿಷ್ಠಾಪನೆ

## ಕುಂಭಾಭಿಷೇಕ ಮಹೋತ್ಸವ: ಸಂಸದ ಶ್ರೇಯಸ್ ಪಟೇಲ್ ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಶಾಂತಿಗ್ರಾಮ ಹೋಬಳಿ ಹೊಂಗೆರೆ ಗ್ರಾಮದಲ್ಲಿ ಶ್ರೀ ಲಕ್ಕಮ್ಮ ( ಶ್ರೀ ಲಕ್ಷ್ಮಿದೇವಿ) ವಿಗ್ರಹ ಪ್ರತಿಷ್ಠಾಪನಾ ಹಾಗೂ ಕುಂಭಾಭಿಷೇಕ ಮಹೋತ್ಸವ ಇಂದು ನಡೆಯಿತು.

ನಿನ್ನೆಯಿಂದಲೇ ವಿವಿಧ ಗ್ರಾಮದೇವರುಗಳ ಪ್ರಾರ್ಥನೆ, ಶ್ರೀ ಮಹಾಗಣಪತಿ ಪ್ರಾರ್ಥನೆ, ಪಿಂಡಿಕಾ ಸ್ಥಾಪನೆ, ಅಷ್ಟಬಂಧ ಪ್ರತಿಷ್ಠೆ, ನೇತ್ರೋನ್ಮಿಂತ ಪ್ರಾಣಪ್ರತಿಷ್ಠೆ, ಪೂರ್ಣಾಹುತಿ, ದೇವರಿಗೆ ಅಭಿಷೇಕ, ಮಹಾಬಲಿ ಪ್ರದಾನ ಮೊದಲಾದ ಕಾರ್ಯಕ್ರಮ ನಡೆದವು. ಇಂದು ವಿಗ್ರಹ ಪ್ರತಿಷ್ಠಾಪನೆ ಮತ್ತು ಕುಂಭಾಭಿಷೇಕ ಮಹೋತ್ಸವ ಜರುಗಿತು. ಇದೇ ವೇಳೆ ದೇವಾಲಯಕ್ಕೆ ನೂತನ ಕಳಶ ಅಳವಡಿಸಲಾಯಿತು. ಸಂಸದ ಶ್ರೇಯಸ್ ಪಟೇಲ್ ಅವರು ಭಾಗಿಯಾಗಿ ದೇವರಿಗೆ



ಮಂಡಿಯೂರಿ ವಿಶೇಷ ಪೂಜೆ ಸಲ್ಲಿಸಿ ಶ್ರೀ ಲಕ್ಷ್ಮಿದೇವಿ ಸಕಲರಿಗೂ ಒಳಿತು ಮಾಡಲಿ ಎಂದು ಪ್ರಾರ್ಥಿಸಿದರು. ಈ ವೇಳೆ ಮಾತನಾಡಿದ ಅವರು, ಗ್ರಾಮದ ಎಲ್ಲರೂ ಇದೇ ರೀತಿಯ ಶಾಂತಿ, ಸಾಮರಸ್ಯ, ಸಹಬಾಳ್ವೆಯಿಂದ ಜೀವನ ನಡೆಸುವಂತೆ ಸಲಹೆ ನೀಡಿದರು.

ಇದಕ್ಕೂ ಮುನ್ನ ದೇವಾಲಯದ ಮುಂದೆ ಲಕ್ಷ್ಮಿದೇವಿ ವಿಗ್ರಹ ಇಟ್ಟು ಊರಿನ ಎಲ್ಲರೂ ಪೂಜೆ ಸಲ್ಲಿಸಿದರು. ಧಾರ್ಮಿಕ ಕಾರ್ಯಕ್ರಮದಲ್ಲಿ ಊರಿನ ಮಹಿಳೆಯರು ಪೂರ್ಣಕುಂಭ ಹೊತ್ತು ಮೆರವಣಿಗೆಯಲ್ಲಿ ಸಾಗಿದರು. ಡೊಳ್ಳು ಕುಣಿತ, ತಮಟೆ ಕಲಾವಿದರ ಕುಣಿತ ಗಮನ ಸೆಳೆಯಿತು.

ಆಗಮಿಸಿದ್ದ ಎಲ್ಲ ಭಕ್ತರಿಗೂ ಪ್ರಸಾದ ವಿನಿಯೋಗ ಮಾಡಲಾಯಿತು.

ಈ ಸಂದರ್ಭದಲ್ಲಿ ಹುಡಾ ಮಾಜಿ ಅಧ್ಯಕ್ಷ ಕೃಷ್ಣಕುಮಾರ್, ಗ್ರಾಮಸ್ಥರಾದ ತಿರುಮಲಸ್ವಾಮಿ ಮೊದಲಾದವರಿದ್ದರು.

# 20 ಶ್ರೀಗಂಧದ ಮರ ಕಳವು

ಅರಸೀಕೆರೆ: ತಾಲ್ಲೂಕಿನ ಬಾಗೇಶಪುರದ ಜಮೀನಿನಲ್ಲಿ ಬೆಳೆದಿದ್ದ 20 ಶ್ರೀಗಂಧದ ಮರಗಳ ಕಳವು ಮಾಡಲಾಗಿದೆ.

ಸಿದ್ದಶೆಟ್ಟಿ ಅವರು 4 ಎಕರೆ ಜಮೀನಿನಲ್ಲಿ ಶ್ರೀಗಂಧದ ಮರ ಬೆಳೆದಿದ್ದರು.

700 ಶ್ರೀಗಂಧದ ಮರಗಳಿದ್ದ ಜಮೀನಿಗೆ ಏ. 2ರ ರಾತ್ರಿ ಲಗ್ಗೆಯಿಟ್ಟಿರುವ ಕಳ್ಳರು 20 ಮರಗಳನ್ನು ಬಡ್ಡೆ ತುಂಡು, ಕೊಂಬೆ ಬಿಟ್ಟು ಮಧ್ಯ ಭಾಗವನ್ನು ಕತ್ತರಿಸಿಕೊಂಡು ಹೋಗಿದ್ದಾರೆ. ಅಂದಾಜು 2 ಲಕ್ಷ ರೂ. ನಷ್ಟವುಂಟಾಗಿದೆ ಎಂದು ಸಿದ್ದಶೆಟ್ಟಿ ಆರೋಪಿಸಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಏ.27 ರ ನಾದ ಧ್ಯಾನದಲ್ಲಿ 4 ಸಾವಿರ ಮಂದಿ ಭಾಗಿ ನಿರೀಕ್ಷೆ: ಅಯ್ಯಪ್ಪ ಪಿಂಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇದೇ ಮೊದಲ ಬಾರಿಗೆ ನಗರದಲ್ಲಿ ನಡೆಯುತ್ತಿರುವ ಹಾಸನ ಧ್ಯಾನ ಚಕ್ರ-5 ರಲ್ಲಿ ಜಿಲ್ಲೆಯವರ ಜೊತೆಗೆ ಹೊರಗಿನಿಂದಲೂ ಸುಮಾರು 3 ರಿಂದ 4 ಸಾವಿರ ಮಂದಿ ಭಾಗಿಯಾಗುವ ನಿರೀಕ್ಷೆ ಇದೆ ಎಂದು ಮೆಡಿಟೇಶನ್ ಕೋಚ್ ಅಯ್ಯಪ್ಪ ಪಿಂಡಿ ತಿಳಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಈ ವಿಷಯ ತಿಳಿಸಿದ ಅವರು,ಏ.27ರಂದು ಬೆಳಗ್ಗೆ 8 ತಿಂಗ ಮಧ್ಯಾಹ್ನ 2 ಗಂಟೆವರೆಗೆ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ನಡೆಯುವ ಧ್ಯಾನದಲ್ಲಿ ಇನ್ನೂ ಹೆಚ್ಚು ಮಂದಿ ಭಾಗಿಯಾಗುವಂತೆ ಮನವಿ ಮಾಡಿದರು. ನಾನು 25 ವರ್ಷದಿಂದ ಧ್ಯಾನ ಮಾಡುತ್ತಿದ್ದೇನೆ. ಆಗಿನಿಂದಲೂ ಆರೋಗ್ಯ ಸಮಸ್ಯೆ ಎಂದು ವೈದ್ಯರ ಬಳಿಗೆ ಹೋಗಿಲ್ಲ ಎಂದ ಅವರು, ಈಗ ಉಚಿತವಾಗಿ ಎಲ್ಲರಿಗೂ ಧ್ಯಾನ ಹೇಳಿಕೊಡುತ್ತಿದ್ದೇನೆ. ಅನೇಕ ದೇಶಗಳ ಜನರಿಗೆ ಐದು ಭಾಷೆಗಳಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಕೋಚಿಂಗ್ ನೀಡುತ್ತಿದ್ದೇನೆ ಎಂದರು.

ಧ್ಯಾನ ಎಂದರೆ ಶ್ವಾಸದ ಮೇಲೆ ಗಮನ ಹರಿಸುವುದು, ಸೆಲ್ಫ್





ಫೀಲಿಂಗ್ ವೃದ್ಧಿಯಾಗಲಿದೆ. ಒತ್ತಡ ಕಡಿಮೆಯಾಗಲಿದೆ.ಮನೆ, ಕಚೇರಿ, ವ್ಯಾಪಾರದ ಸ್ಥಳ ಎಲ್ಲೇ ಆಗಲಿ ಧ್ಯಾನ ಮಾಡಿದರೆ ಶಕ್ತಿ ವೃದ್ಧಿಸಲಿದೆ. ಮೊದಲು ನಮ್ಮೊಳಗೆ ಬದಲಾವಣೆ ಆದರೆ ಉಳಿದೆಲ್ಲವನ್ನು ಬದಲು ಮಾಡಬಹುದು.

ಈ ಕಾರಣಕ್ಕೆ ಎಲ್ಲೆಡೆ ಧ್ಯಾನದ ಬಗ್ಗೆ ಜಾಗೃತಿ ಮಾಡಲಾಗುತ್ತಿದೆ ಎಂದು ಹೇಳಿದರು.

ನಗರದ ಅನೇಕ ಕಡೆಗಳಲ್ಲಿ ಧ್ಯಾನದ ಬಗ್ಗೆ ಕೋಚ್ ನೀಡಿದ್ದೇವೆ. ಎಲ್ಲ ಕಡೆಯಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.ವಕೀಲರು ಇದೊಂದು ಉತ್ತಮ ಕಾರ್ಯಕ್ರಮ ಎಂದಿದ್ದಾರೆ. ವಿದ್ಯಾರ್ಥಿ ಹಂತದಿಂದಲೇ ಧ್ಯಾನ ಆರಂಭಿಸಿದರೆ ಸಾಕಷ್ಟು ಅನುಕೂಲ ಆಗಲಿದೆ ಎಂದರು.

ಯಾರೇ ಆಗಲಿ ಕನಿಷ್ಠ 40 ದಿನ ಧ್ಯಾನ ಮಾಡಿದರೆ ನೆಗೆಟಿವ್ ಆಲೋಚನೆ ದೂರ ಆಗಲಿವೆ. ಪಾಸಿಟಿವ್ ಎನರ್ಜಿ ದೂರ ಆಗಲಿದೆ. ಆರೋಗ್ಯ ಶಾಂತಿ ಎಲ್ಲರಿಗೂ ಬರಲಿ ಎಂಬುದು ಧ್ಯಾನದ ಉದ್ದೇಶ ಎಂದರು.

ಏ.27 ರ ಕಾರ್ಯಕ್ರಮಕ್ಕೆ ರೋಟರಿ ಕ್ಲಬ್ ಆಫ್ ಹಾಸನ ಸೆಂಟ್ರಲ್ ಬೆಂಬಲ ನೀಡುತ್ತಿದೆ ಎಂದು ರಮೇಶ್ ಕೆ.ಎಲ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಕಾಶ್ ಮೇಗಳಕೇರಿ, ಸ್ವಾಮಿ, ಮಮತಾ ಇದ್ದರು.

# ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ : ನ್ಯಾಯಕ್ಕಾಗಿ ಮನವಿ




ಹಾಸನ: ನಕಲಿ ದಾಖಲೆ ಸೃಷ್ಟಿಸಿ ತಮ್ಮ ಜಮೀನು ಮಾರಾಟ ಮಾಡಿರುವ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ತಾಲ್ಲೂಕಿನ ತ್ಯಾವೀಹಳ್ಳಿ ಗ್ರಾಮದ ದಂಪತಿ ವಿಶ್ವನಾಥ್ ಮತ್ತು ರತಿ ಒತ್ತಾಯಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಂತಿಗ್ರಾಮ ಹೋಬಳಿ ತ್ಯಾವೀಹಳ್ಳಿ ಗ್ರಾಮದ ಸರ್ವೆ ನಂ.18/4ರಲ್ಲಿ 7 ಗುಂಟೆ ಜಮೀನಿದೆ. ಇದರಲ್ಲಿ 1 ಗುಂಟೆ ಖರಾಬು ಇದೆ. ಉಳಿದ 6 ಗುಂಟೆ ಜಮೀನು ಒಟ್ಟು ಕುಟುಂಬದ ಜಂಟಿಯಲ್ಲಿದೆ. ಈ ಜಮೀನನ್ನು ಟಿ.ಸಿ.ಮಧುಸೂದನ್ ಎಂಬ ಮಧ್ಯವರ್ತಿ ನಮ್ಮ ಗಮನಕ್ಕೆ ಬಾರದೆ ವಿಶ್ವನಾಥ್ ಅವರ ಸಹಿ ನಕಲು ಮಾಡಿ, ಅವರ ಬದಲಿಗೆ ಬೇರೊಬ್ಬ ವ್ಯಕ್ತಿಯ ಫೋಟೋ ತೆಗೆಸಿ ಹಾಸನ ಮೂಲದ ಹೆಚ್. ಎಸ್.ಲಕ್ಷ್ಮೀ ಮತ್ತು ಶರತ್ ಚಂದ್ರ ಅವರ ಹೆಸರಿಗೆ ನೋಂದಣಿ ಮಾಡಿಸಿದ್ದಾರೆ ಎಂದು ದೂರಿದರು.

ಈ ಹಿಂದೆ ಮಧುಸೂದನ್ ಅವರು ಜಮೀನು ಮಾರಾಟ ಮಾಡುವಂತೆ ಕೇಳಿದ್ದರು. ಅದಕ್ಕೆ ನಾವು ಒಪ್ಪದೇ ಇದ್ದಾಗ ವಿಶ್ವನಾಥ್ ಅವರ ಆಧಾರ್ ಕಾರ್ಡ್ ದುರುಪಯೋಗ ಪಡಿಸಿಕೊಂಡು, ಯಾರೋ 3ನೇ ವ್ಯಕ್ತಿಯನ್ನು ಕರೆದುಕೊಂಡು ಹೋಗಿ ನೋಂದಣಿ ಕಚೇರಿಯಲ್ಲಿ ಫೋಟೋ ತೆಗೆಸಿ ಬೇರೆಯವರ ಹೆಸರಿಗೆ ಕ್ರಯ ಮಾಡಿಕೊಡಲಾಗಿದೆ ಎಂದು ಆರೋಪಿಸಿದರು. ಈ ಬಗ್ಗೆ ಶಾಂತಿಗ್ರಾಮ ಠಾಣೆಗೆ ದೂರು ನೀಡಿದರೆ, ಪೊಲೀಸರು ಜಿಲ್ಲಾಧಿಕಾರಿಗೆ ದೂರು ನೀಡುವಂತೆ ತಿಳಿಸಿದರು. ಅದರಂತೆ ಜಿಲ್ಲಾಡಳಿತ, ತಾಲ್ಲೂಕು ಆಡಳಿತಕ್ಕೂ ದೂರು ನೀಡಲಾಗಿದ್ದರೂ, ಸಂಬಂಧಪಟ್ಟವರು ಸ್ಥಳ ಹಾಗೂ ದಾಖಲೆ ಪರಿಶೀಲಿಸಿ ನಮಗೆ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿದರು.

ನಮ್ಮ ಜಮೀನನ್ನು ಮಾಲೀಕರ ಗಮನಕ್ಕೆ ಬಾರದಂತೆ ನಕಲಿ ವ್ಯಕ್ತಿಯ ದಾಖಲೆ ಸೃಷ್ಟಿಸಿ ಜಮೀನು ನೋಂದಣಿ ಮಾಡಿಸಿರುವ ಮಧುಸೂದನ್ ಹಾಗೂ ಯಾವುದೇ ಪರಿಶೀಲನೆ ನಡೆಸದೇ ಜಮೀನು ಖರೀದಿ ಮಾಡಿರುವ ವ್ಯಕ್ತಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

# ವೈದ್ಯರಿಗೆ ರಕ್ಷಣೆ ನೀಡಲು ಮನವಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಕಲಗೂಡು: ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಕರ್ತವ್ಯ ನಿರತ ವೈದ್ಯರು ಮತ್ತು ಸಿಬ್ಬಂದಿಯೊಂದಿಗೆ ಅನುಚಿತವಾಗಿ ವರ್ತಿಸಿದ್ದು ಇಂತಹ ಕೃತ್ಯ ಮರುಕಳಿಸದಂತೆ ಕ್ರಮ ಜರುಗಿಸಬೇಕು ಹಾಗೂ ಆಸ್ಪತ್ರೆಗೆ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿ ಸಾರ್ವಜನಿಕ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ ಶುಕ್ರವಾರ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದರು.

ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಸ್ವಾಮಿಗೌಡ ಮಾತನಾಡಿ, ಕರ್ತವ್ಯ ನಿರತ ವೈದ್ಯರು, ಸಿಬ್ಬಂದಿ ಮೇಲೆ ಆಗಾಗ ಹಲ್ಲೆಗೆ ಯತ್ನಿಸುವುದು ಮತ್ತು ಅವರ ಜೊತೆಯಲ್ಲಿ ಬರುವವರಿಂದ ವಿನಾಕಾರಣ ಗಲಾಟೆಗಳು ನಡೆಯುತ್ತಿವೆ. ಈ ಹಿಂದೆಯೂ ಕೂಡ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ವೈದ್ಯರ ಮೇಲೆ ಹಲ್ಲೆ ಕೂಡ ನಡೆದಿದೆ. ನಾವು ಮಾನವೀಯ ದೃಷ್ಟಿಯಿಂದ ಅಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸದೆ ಜನರಿಗೆ ಸೇವೆ ನೀಡಲಾಗುತ್ತಿದೆ. ಕೆಲವು ಚಿಕಿತ್ಸೆ ಸೌಕರ್ಯಕ್ಕೆ ಸರ್ಕಾರವೇ ಇಂತಿಷ್ಟು ಹಣ ನಿಗದಿ ಮಾಡಿದೆ, ಬಿಪಿಎಲ್ ಕಾರ್ಡ್ ಇಲ್ಲದವರಿಗೆ ಇಂತಿಷ್ಟು ಹಣವನ್ನು ಕಟ್ಟಬೇಕಿದೆ. 60 ರೂ. ಸರ್ಕಾರ ನಿಗದಿಪಡಿಸಿರುವ ಶುಲ್ಕ ಪಾವತಿಸಲು ಸೂಚಿಸಿದ್ದಕ್ಕೆ ಅನುಚಿತವಾಗಿ ವರ್ತಿಸಿದ್ದಾರೆ. ಇನ್ನು ಮುಂದೆ ಈ ರೀತಿಯ ಘಟನೆಗಳಾದರೆ ಸಹಿಸುವುದಿಲ್ಲ, ಆಸ್ಪತ್ರೆಗೆ ಪೊಲೀಸರನ್ನು ನಿಯೋಜನೆ ಮಾಡಿದರೆ ನಮಗೆ ರಕ್ಷಣೆ ದೊರೆಯಲಿದೆ. ಈ ಸಂಬಂಧ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ ಎಂದು ಹೇಳಿದರು.

ನಿಂದನೆಗೆ ಒಳಗಾದ ವೈದ್ಯ ಡಾ. ಮುಖೇಶ್‌ಕುಮಾರ್ ಮಾತನಾಡಿ, ಕರ್ತವ್ಯ ಮಾಡುವ ವೇಳೆ ಎರಡು ಮೂರು ಬಾರಿ ನನ್ನ ಮೇಲೆ ಗಲಾಟೆ ಆಗಿದೆ.

ಜನಸೇವೆಗಾಗಿ ನಿರಂತರ ಕೆಲಸ ಮಾಡುವ ನಮಗೆ ಹೀಗಾದರೆ ಬೇಸರವಾಗುತ್ತದೆ. ಜನರು ವಿನಾಕಾರಣ ತೊಂದರೆ ಕೊಡುತ್ತಾರೆ ಎಂದರು.

ಗುರುವಾರ ರಾತ್ರಿ 8.30ರ ವೇಳೆ ತಾಲ್ಲೂಕಿನ ವಿಜಾಪುರ ಕಾಲನಿಯ ಸುಚಿತ್ರಾ ಎಂಬ ಮಹಿಳೆ ಚಿಕಿತ್ಸೆಗೆಂದು ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರಿಂದ ಚಿಕಿತ್ಸೆ ಪಡೆದ ಬಳಿಕ ಹೊರರೋಗಿ ಕಾರ್ಡ್‌ಗೆ 10 ರೂ. ಮತ್ತು ಇತರೆ ಚಿಕಿತ್ಸೆ ವೆಚ್ಚ ಸೇರಿ 60 ರೂ. ಹಣ ನೀಡುವಂತೆ ಚೀಟಿಯನ್ನು ಸಿಬ್ಬಂದಿ ನೀಡಿದ್ದಾರೆ.

ಸರ್ಕಾರಿ ಆಸ್ಪತ್ರೆ ಎಂದರೆ ಎಲ್ಲವು ಉಚಿತ ಹಣ ಯಾಕೆ ನೀಡಬೇಕು ಎಂದು ಮಹಿಳೆಯೊಂದಿಗೆ ಬಂದಿದ್ದ ಆಕೆಯ ಮಾವ ಮಂಜು ಮತ್ತು ಪತಿ ಕಿರಣ್ ಎಂಬುವರು ಪ್ರಶ್ನೆ ಮಾಡಿದ್ದಲ್ಲದೇ ಹಣ ಕೊಡಲು ಸಾಧ್ಯವಿಲ್ಲ. ನೀವು ನೀಡಿರುವ ಚೀಟಿ ಅಸಲಿಯಲ್ಲ ನಕಲಿ ಎಂದು ಏರು ಧ್ವನಿಯಲ್ಲಿ ಮಾತನಾಡಿದಲ್ಲದೇ ಸಿಬ್ಬಂದಿಯೊಂದಿಗೆ ಅನುಚಿತವಾಗಿ ವರ್ತಿಸಿದರಲ್ಲದೇ ಈ ಬಗ್ಗೆ ವೈದ್ಯರೊಂದಿಗೆ ಮಾತನಾಡುತ್ತೇವೆ ಎಂದು ಧಮಕಿ ಹಾಕಿ ವೈದ್ಯರ ಕೊಠಡಿಗೆ ತೆರಳಿ ಅವರನ್ನು ಪ್ರಶ್ನೆಮಾಡಿದಲ್ಲದೇ ಅವರೊಂದಿಗೂ ಕೂಡ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿದರು.

ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಸ್ವಾಮಿಗೌಡ ನೇತೃತ್ವದಲ್ಲಿ ನಿಂದನೆಗೆ ಒಳಗಾದ ವೈದ್ಯ ಡಾ. ಮುಖೇಶ್ ಕುಮಾರ್, ಡಾ. ಮಂಜುನಾಥ್, ಡಾ. ಸುನಿಲ್, ಡಾ. ವಾಸವಿ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು, ಶುಶ್ರೂಷಣಾಧಿಕಾರಿಗಳಾದ ಚಂದ್ರಮತಿ, ಹರಿಣಾಕ್ಷಿ, ಶುಶ್ರೂಷಕರಾದ ಪೂರ್ಣಿಮಾ, ಶಾಂತಮ್ಮ, ಶ್ವೇತಾ, ಸಿಬ್ಬಂದಿ ಲೋಕೇಶ್, ನಂದಿನಿ, ಅರ್ಜುನ್ ಹಾಗು ಇತರರು ಅರಕಲಗೂಡು ಪೊಲೀಸ್ ಠಾಣೆಗೆ ತೆರಳಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ದೂರು ಸಲ್ಲಿಸಿದರು.

# ಪಹಲ್ಗಾಮ್: ಮೋದಿ ಪ್ರತೀಕಾರ ಖಂಡಿತಾ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಳೇಬೀಡು: ಕಾಶ್ಮೀರದ ಪಹಲ್ಗಾಮ್ ಘಟನೆಗೆ ಪ್ರಧಾನಿ ನರೇಂದ್ರ ಮೋದಿ ಪ್ರತೀಕಾರ ತೀರಿಸಿಕೊಳ್ಳುತ್ತಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಪ್ರವಾಸಿಗರ ಹತ್ಯಾಕಾಂಡದಲ್ಲಿ ಯಾವ ಧರ್ಮ ಎಂದು ಕೇಳಿ ಅಮಾಯಕ ಹಿಂದುಗಳನ್ನು ಮಾತ್ರ ಗುರಿಯಾಗಿಸಿ ಕೊಲ್ಲಲಾಗಿದೆ. ಅದಕ್ಕೆ ಪ್ರತಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಈಗಾಗಲೇ ದಿಟ್ಟ ಹೆಜ್ಜೆ ಇಟ್ಟಿದ್ದು ಈ ಕೃತ್ಯಕ್ಕೆ ಪುಷ್ಟಿ ನೀಡುತ್ತಿರುವ ಪಾಕಿಸ್ತಾನದ ವಿರುದ್ಧ ಎಲ್ಲಾ ರೀತಿಯ ರಾಜತಾಂತ್ರಿಕ ವ್ಯವಸ್ಥೆಯನ್ನು ನಿರ್ಬಂಧ ಗೊಳಿಸುವ ಮೂಲಕ ಭಯೋತ್ಪಾದನೆ ವಿರುದ್ಧ ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಅತಿ ಶೀಘ್ರದಲ್ಲಿ ಉಗ್ರರ ಹೆಡೆಮುರಿ ಕಟ್ಟುವ ಮೂಲಕ 26 ಭಾರತೀಯ ಪ್ರವಾಸಿಗರ ಆತ್ಮಕ್ಕೆ ಶಾಂತಿ ಸಿಗುವಂತೆ ಮಾಡಲಿದ್ದಾರೆ ಎಂದರು. ಉಗ್ರರ ಗುರಿ ಉದ್ದೇಶಗಳು ಎಂದಿಗೂ ಕೂಡ ಈಡೇರಲು ಬಿಡುವುದಿಲ್ಲ. ಮುಸ್ಲಿಮರೆಲ್ಲರೂ ಕೂಡ ಭಯೋತ್ಪಾದಕರಲ್ಲ ಆದರೆ ಮುಸ್ಲಿಮರಿಲ್ಲದೆ ಭಯೋತ್ಪಾದನೆ ಇಲ್ಲ. ಈ ಕಾರಣಕ್ಕಾಗಿ ಓಲೈಕೆ ರಾಜಕಾರಣವನ್ನು ಬಿಟ್ಟು ಸದೃಢ ದೇಶ ಕಟ್ಟುವ ನಿಟ್ಟಿನಲ್ಲಿ ನಾವೆಲ್ಲರೂ ಸಾಗಬೇಕಿದೆ ಎಂದು ತಿಳಿಸಿದರು. ದೇಶ, ಭಾಷೆ, ನೆಲ, ಜಲ ವಿಷಯ ಬಂದಾಗ ರಾಜಕಾರಣ ಹೊರಗಿಟ್ಟು ದೇಶ ಬಲಪಡಿಸುವ ಪ್ರಯತ್ನ ಪ್ರತಿಯೊಬ್ಬರಿಂದಲೂ ಆಗಬೇಕಿದೆ. ಮುಸ್ಲಿಮರ ದಾಳಿಗಳು ಇದೇ ಮೊದಲಲ್ಲ. 7ನೇ ಶತಮಾನದಿಂದ 21ನೇ ಶತಮಾನದವರೆಗೂ ವಿಕೃತ ಮನಸ್ಸಿನ ಹಲವು ಮುಖಗಳು ಭಾರತದ ವಿರುದ್ಧ ದ್ವೇಷ ಸಾಧಿಸುತ್ತಲೇ ಇವೆ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ತಾಲ್ಲೂಕು ಪಂಚಾಯಿತಿ ಸದಸ್ಯರಾದ ಸೋಮಶೇಖರ್, ಮುಖಂಡರಾದ ಹರೀಶ್, ರಮೇಶ್ ರಂಜಿತ್, ಸುನಿಲ್, ಗಂಗೂರ್ ಶಿವಕುಮಾರ್, ರೇಣುಕುಮಾರ್, ಹರೀಶ್, ಅಡಗೂರು ಬಸವರಾಜ್, ಅಮಿತ್‌ಶೆಟ್ಟಿ ಮತ್ತಿತರರಿದ್ದರು.

# ಜನರೆಡೆಗೆ ಕಾವ್ಯ ಕಾರ್ಯಕ್ರಮ ಇಂದು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕಾವ್ಯ ಸಂಸ್ಕೃತಿ ಯಾನ ಸಂಘಟನೆಯಿಂದ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏ. 26ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಜನರೆಡೆಗೆ ಕಾವ್ಯ ಕಾರ್ಯಕ್ರಮ ಆಯೋಜಿಸಲಾಗಿದೆ.

ಹಿರಿಯ ಸಾಹಿತಿ ಡಾ. ನಲ್ಲೂರು ಪ್ರಸಾದ್ ಅಧ್ಯಕ್ಷತೆ ವಹಿಸುವರು. ರಾಜ್ಯಸಭೆ ಮಾಜಿ ಸದಸ್ಯ ಎಲ್. ಹನುಮಂತಯ್ಯ ಅವರು ಕಾವ್ಯ ಕವಿಗೋಷ್ಠಿಯ ದೀವಟಿಗೆಯನ್ನು ಡಾ. ನಲ್ಲೂರು ಪ್ರಸಾದ್ ಅವರಿಗೆ ಹಸ್ತಾಂತರಿಸಲಿದ್ದಾರೆ. ಸಾಹಿತ್ಯ ಪರಿಷತ್ ಭವನದ ಅನಕೃ ದ್ವಾರದಿಂದ ಕಿರಂ ನಾಗರಾಜ ವೇದಿಕೆ ವರೆಗೆ ಮೆರವಣಿಗೆ ನಡೆಯಲಿದೆ. ಸಾಹಿತಿ ಬಾನು ಮುಷ್ತಾಕ್ ಅವರಿಗೆ ಅಭಿನಂದನೆ ಸಮಾರಂಭ ನಡೆಯಲಿದೆ.

ಕಾವ್ಯ ಸಂಸ್ಕೃತಿ ಯಾನದ ರಾಜ್ಯ ಸಂಚಾಲಕ ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ಕವಿಗೋಷ್ಠಿಗಳು ನಡೆಯಲಿದ್ದು ಮೊದಲ ಕವಿಗೋಷ್ಠಿಗೆ ಹಿರಿಯ ಕವಿ ಎನ್.ಎಲ್. ಚನ್ನೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಎರಡನೇ ಕವಿಗೋಷ್ಠಿಗೆ ಕವಯಿತ್ರಿ ಜ.ನಾ. ತೇಜಶ್ರೀ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಚ್. ಎಲ್. ಮಲ್ಲೇಶ್‌ಗೌಡ ಸಮಾರೋಪ ನುಡಿಗಳನ್ನಾಡಲಿದ್ದಾರೆ.

# ಚಿಕಿತ್ಸೆ ಫಲಿಸದೆ ಯುವಕ ಸಾವು ಸಂಬಂಧಿಕರ ಆಕ್ರೋಶ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ದಾಖಲಾಗಿದ್ದ ಯುವಕ ಚಿಕಿತ್ಸೆ ಫಲಿಸದೆ ಶುಕ್ರವಾರ ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಆರೋಪಿಸಿ ಆತನ ಕುಟುಂಬಸ್ಥರು ಪ್ರತಿಭಟನೆ ನಡೆಸಿದರು.

ಶಾಂತಿಗ್ರಾಮ ಹೋಬಳಿ ಮುತ್ತಿಗೆ ಹಿರೆಹಳ್ಳಿ ಗ್ರಾಮದ ಧರಣೇಶ್ (22) ಮೃತ ಯುವಕ. 50ಕ್ಕೂ ಹೆಚ್ಚು ಜನರು ಆಸ್ಪತ್ರೆ ಎದುರು ಗಲಾಟೆ ನಡೆಸಿದರು ಮಾತ್ರವಲ್ಲದೆ ಆಸ್ಪತ್ರೆ ಕಿಟಕಿ ಗಾಜುಗಳನ್ನು ಪುಡಿ ಪುಡಿ ಮಾಡಿದರು. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಸ್ಥಳಕ್ಕೆ ದೌಡಾಯಿಸಿದ ಬಡಾವಣೆ ಠಾಣೆ ಪೊಲೀಸರು ಎಲ್ಲರನ್ನೂ ಸಮಾಧಾನಪಡಿಸಲು ಹರಸಾಹಸಪಟ್ಟರು.

ಆಸ್ಪತ್ರೆ ಮುಂದೆ ಆ್ಯಂಬುಲೆನ್ಸ್ ನಿಲ್ಲಿಸಿದ ಮೃತನ ಕುಟುಂಬಸ್ಥರು ಸಾವಿಗೆ ನ್ಯಾಯ ಸಿಗುವ ವರೆಗೆ ಮೃತದೇಹವನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಪಟ್ಟು ಹಿಡಿದರು. ಪೊಲೀಸರ ಜೊತೆಗೂ ವಾಗ್ವಾದ ನಡೆಸಿದರು. ಅದರಿಂದ ಒಂದು ಗಂಟೆಗೂ ಹೆಚ್ಚು ಕಾಲ ಟ್ರಾಫಿಕ್ ಜಾಂ ಉಂಟಾಯಿತು.

ತೀವ್ರ ಜ್ವರದಿಂದ ಬಳಲುತ್ತಿದ್ದ ಧರಣೇಶ್ ಅವರನ್ನು ಬೆಳಿಗ್ಗೆ 7 ಗಂಟೆಗೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಯುವಕ ಮಧ್ಯಾಹ್ನ 2 ಗಂಟೆಗೆ ಮೃತಪಟ್ಟಿದ್ದಾನೆ ಎಂದು ವೈದ್ಯರು ಸಂಬಂಧಿಕರಿಗೆ ತಿಳಿಸಿದ್ದಾರೆ. ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೂ ಕೇವಲ ಜ್ವರಕ್ಕೆ ಮೃತಪಟ್ಟಿದ್ದು ಏಕೆ ಎಂದು ವೈದ್ಯರ ವಿರುದ್ಧ ಸಂಬಂಧಿಕರು ಹರಿಹಾಯ್ದರು. ಈ ವೇಳೆ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು. ಪೊಲೀಸರು ಬಂದ ಬಳಿಕ ಮುಖ್ಯ ಗೇಟ್‌ಗೆ ಬಂದ ವೈದ್ಯರು, ಯುವಕ ಧರಣೇಶ್‌ಗೆ ಬ್ರೈನ್ ಟ್ಯೂಮರ್ ಕಾಯಿಲೆ ಇರುವುದು ಸ್ಕ್ಯಾನಿಂಗ್ ವರದಿಯಲ್ಲಿ ಗೊತ್ತಾಗಿದೆ. ಈ ವಿಚಾರವನ್ನು ಕುಟುಂಬಸ್ಥರಿಗೆ ಮೊದಲೇ ತಿಳಿಸಿದ್ದೇವೆ. ಜ್ವರದಿಂದ ಮಾತ್ರ ಮೃತಪಟ್ಟಿಲ್ಲ ಎಂದು ಸಮಜಾಯಿಷಿ ನೀಡಲು ಮುಂದಾದರು. ಪೊಲೀಸರು ಎರಡೂ ಕಡೆಯವರನ್ನು ಸಮಾಧಾನಪಡಿಸಿ ಮೃತದೇಹವನ್ನು ಗ್ರಾಮಕ್ಕೆ ಕರೆದೊಯ್ಯುವ ವ್ಯವಸ್ಥೆ ಮಾಡಿದರು.

# ಸ್ವಸ್ಥ ಸಮಾಜಕ್ಕೆ ಎಲ್ಲರ ಸಹಕಾರ ಅಗತ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಅರಸೀಕೆರೆ: ಸಮಾಜದ ಸ್ವಾಸ್ಥ್ಯ ರಕ್ಷಣೆ ಜೊತೆಗೆ ಅಪರಾಧ ಪ್ರಕರಣ ಪತ್ತೆ ಮಾಡಲು ಸಂಘ, ಸಂಸ್ಥೆಗಳು ಆರಕ್ಷಕ ಇಲಾಖೆಯೊಂದಿಗೆ ಕೈ ಜೋಡಿಸಲು ಮುಂದಾಗಿರುವುದು ಶ್ಲಾಘನೀಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಹೇಳಿದರು.

ನಗರಸಭೆ ಸದಸ್ಯೆ ಸುಜಾತಾ ರಮೇಶ್ ಬಳಗದ ವತಿಯಿಂದ ಏರ್ಪಡಿಸಿದ್ದ ಸಿಸಿಟಿವಿ ಅಳವಡಿಕೆ ಹಾಗು 5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ್ದ ಮನೆಯನ್ನು ಫಲಾನುಭವಿಗೆ ವಿತರಿಸಿ ಮಾತನಾಡಿದರು.

ಆಧುನಿಕ ಯುಗದಲ್ಲಿ ಜ್ಞಾನ, ವಿಜ್ಞಾನ, ತಂತ್ರಜ್ಞಾನ ಪ್ರಗತಿ ಪಥದಲ್ಲಿ ಸಾಗಿದೆ. ಅಷ್ಟೇ ಪ್ರಮಾಣದಲ್ಲಿ ವಾಹನ, ಚಿನ್ನಾಭರಣ ಕಳವು, ಕೊಲೆ, ದರೋಡೆ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ ಎಂದು ಹೇಳಿದರು.

ಅನಂತ ಇಂಟರ್‌ನ್ಯಾಷನಲ್ ಶಾಲೆಯ ಚೇರ್ಮನ್ ಆರ್. ಅನಂತಕುಮಾರ್ ಮಾತನಾಡಿ, ಅನಾರೋಗ್ಯ ಪೀಡಿತರಿಗೆ ಔಷಧ, ಮಾತ್ರೆ ವಿತರಣೆ, ಅಶಕ್ತರಿಗೆ ಮನೆ ನಿರ್ಮಾಣ ಮಾಡಿಕೊಡುವುದು, ಉಚಿತ ಲ್ಯಾಪ್‌ಟಾಪ್ ಕೊಡುಗೆ, ವಿದ್ಯಾರ್ಥಿ ವೇತನ ಸವಲತ್ತು ಸೇರಿ ಹಲವು ರೀತಿಯ ಸಮಾಜಮುಖಿ ಕೆಲಸದಲ್ಲಿ ಸುಜಾತಾ ರಮೇಶ್ ಬಳಗ ಹಲವು ವರ್ಷಗಳಿಂದ ತೊಡಗಿಸಿಕೊಂಡಿದೆ. ಇದೀಗ ವಾರ್ಡ್ ನಿವಾಸಿಗಳ ಸುರಕ್ಷತೆ ಮನಗಂಡು ಸಿಸಿಟಿವಿ ಅಳವಡಿಕೆ ಮಾಡಲು ಮುಂದಡಿ ಇಟ್ಟಿರುವುದು ಪ್ರಶಂಸನೀಯ ಎಂದರು.

ನಗರ ಠಾಣೆ ಇನ್ಸ್‌ಪೆಕ್ಟರ್ ರಾಘವೇಂದ್ರ ಮಾತನಾಡಿ, ಮನೆಗಳವು, ಬೈಕ್ ವ್ಹೀಲಿಂಗ್, ದರೋಡೆ ಮೊದಲಾದ ಪ್ರಕರಣ ಪತ್ತೆಗೆ ಸಿಸಿಟಿವಿ ನೆರವಾಗುತ್ತದೆ. ನಗರಸಭೆ ಸದಸ್ಯರು ತಮ್ಮ ವಾರ್ಡ್ ಗಳಲ್ಲಿ ಯೋಜನೆ ಕಾರ್ಯಗತಗೊಳಿಸಲು ಮುಂದಾಗಬೇಕು ಎಂದು ಹೇಳಿದರು.

ವಿಷ್ಣು ಸೇನಾ ಸಮಿತಿ ಅಧ್ಯಕ್ಷ ವೀರಕಪುತ್ರ ಶ್ರೀನಿವಾಸ್ ಅವರು ಮಾತನಾಡಿ, ಸಂಘ ಸಂಸ್ಥೆಗಳ ಕೆಲಸವನ್ನು ನಾಗರಿಕರು ಪ್ರೋತ್ಸಾಹಿಸಿ ಬೆನ್ನು ತಟ್ಟಬೇಕು. ಒಳ್ಳೆಯ ಕೆಲಸಕ್ಕೆ ಅಡ್ಡಿ ಮಾಡಬೇಡಿ ಎಂದರು.

ಬೆಂಗಳೂರು ನಗರ ಕರವೇ ಅಧ್ಯಕ್ಷ ಧರ್ಮರಾಜ್ ಗೌಡ, ನಗರಸಭೆ ಸದಸ್ಯೆ ಶ್ವೇತಾ ರಮೇಶ್ ನಾಯ್ಡು, ವಕೀಲ ವಿವೇಕ್, ತಾಲ್ಲೂಕು ಕರವೇ ಅಧ್ಯಕ್ಷ ಕಿರಣ್ ಕುಮಾರ್, ಜಿಲ್ಲಾ ಉಪಾಧ್ಯಕ್ಷ ತುಳಸಿ, ಬಳಗದ ಸಂತೋಷ್, ಶಿವಣ್ಣ, ಕುಮಾರ್, ಕೃಷ್ಣ, ವಸಂತ್ ಹಾಜರಿದ್ದರು.

# ವೈಯಕ್ತಿಕ ದ್ವೇಷ: ಅಡಿಕೆ ಗಿಡಗಳ ನಾಶ



ಬೇಲೂರು: ತಾಲ್ಲೂಕಿನ ಕರಗಡ ಗ್ರಾಮದಲ್ಲಿ ವೈಯಕ್ತಿಕ ದ್ವೇಷದಿಂದ ಕಿಡಿಗೇಡಿಗಳು 70ಕ್ಕೂ ಹೆಚ್ಚು ಅಡಿಕೆ ಗಿಡಗಳನ್ನು ಕಡಿದು ನಾಶಪಡಿಸಿದ್ದಾರೆ.

ಜಯಣ್ಣ ಎಂಬುವವರಿಗೆ ಸೇರಿದ ಜಮೀನಿನಲ್ಲಿ ಬೆಳೆದಿದ್ದ ಅಡಿಕೆ ಗಿಡಗಳನ್ನು ಕತ್ತರಿಸಲಾಗಿದೆ. ನಾಲ್ಕೂವರೆ ವರ್ಷದ ಗಿಡಗಳು ಹೊಂಬಾಳೆ ಬಿಟ್ಟಿದ್ದವು. ಅದರಿಂದ ಅಷ್ಟೋ ಇಷ್ಟೋ ಆದಾಯ ಕೈ ಸೇರಲಿದೆ ಎಂದು ರೈತ ನಿರೀಕ್ಷೆಯಲ್ಲಿದ್ದರು.

ಆದರೆ ಈಗ ಕಷ್ಟಪಟ್ಟು ಬೆಳೆದಿದ್ದ ಅಡಿಕೆ ಗಿಡಗಳನ್ನು ಕಳೆದುಕೊಂಡು ಜಯಣ್ಣ ಕಂಗಾಲಾಗಿದ್ದಾರೆ. ಸ್ಥಳಕ್ಕೆ ಬೇಲೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಆಗಿರುವ ನಷ್ಟಕ್ಕೆ ಸೂಕ್ತ ಪರಿಹಾರ ನೀಡುವಂತೆ ರೈತ ಮನವಿ ಮಾಡಿದ್ದಾರೆ.

ನನಗೆ ಇದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ಅರ್ಧ ಎಕರೆ ಕಷ್ಟಪಟ್ಟು ಗಿಡಗಳನ್ನು ಬೆಳೆಸಿದ್ದೆ. ಇದೀಗ ಎಲ್ಲವೂ ನಾಶವಾಗಿದೆ ಕಣ್ಣೀರಿಟ್ಟಿದ್ದಾರೆ. ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿರುವ ಪೊಲೀಸರು ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ.

**ತಹಶೀಲ್ದಾರ್ ಭೇಟಿ:** ಜಯಣ್ಣ ಅವರ ಜಮೀನಿಗೆ ತಹಶೀಲ್ದಾರ್ ಎಂ. ಮಮತಾ ಭೇಟಿ ನೀಡಿ ಪರಿಶೀಲಿಸಿದರು. ಈ ರೀತಿ ಬೆಳೆಗಳನ್ನು ಕಡಿದು ನಾಶಮಾಡುವುದು ಖಂಡನೀಯ. ಈಗಾಗಲೇ ಯಾರು ಈ ದುಷ್ಕೃತ್ಯ ಮಾಡಿದ್ದಾರೆಯೋ ಅವರನ್ನು ಪತ್ತೆಮಾಡಿ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಹಶೀಲ್ದಾರ್ ಹೇಳಿದರು.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್ 26

**ಭಾರತೀಯ ಇತಿಹಾಸದಲ್ಲಿ**

2005 ಭಾರತದಲ್ಲಿ RTI ಮಾಹಿತಿ ಹಕ್ಕು ಕಾಯ್ದೆ ರಾಷ್ಟ್ರಪತಿಯ ಒಪ್ಪಿಗೆ ಪಡೆದು ಕಾಯ್ದೆಯಾಗಿದ್ದು, ನಾಗರಿಕರಿಗೆ ಮಾಹಿತಿ ಹಕ್ಕು ಸಿಕ್ಕಿತು.

**ಜಾಗತಿಕ ಇತಿಹಾಸದಲ್ಲಿ**

1937 ಜರ್ಮನಿಯ ನಾಜಿ ಸೇನೆ ಸ್ಪೇನ್ ದೇಶದ ಗೆರ್ನಿಕಾ ಪಟ್ಟಣದ ಮೇಲೆ ಭೀಕರವಾಗಿ ಬಾಂಬ್ ದಾಳಿ ನಡೆಸಿತು. ಈ ಘಟನೆ ಪಬ್ಲೋ ಪಿಕಾಸೋ ಅವರ ಪ್ರಸಿದ್ಧ ಚಿತ್ರಕೃತಿಗೆ ಪ್ರೇರಣೆಯಾಯಿತು.


1986 ಚೆರ್ನೋಬಿಲ್ ದುರಂತ: ಪ್ರಪಂಚದ ಅತೀ ಭೀಕರ ಅಣು ವಿದ್ಯುತ್ ಸ್ಥಾವರ ವಿಫಲತೆ ಉಕ್ರೇನಿನ ಚೆರ್ನೋಬಿಲ್‌ನಲ್ಲಿ ಸಂಭವಿಸಿತು. ಇದರಿಂದ ಸಾವಿರಾರು ಜನರಿಗೆ ಪರಿಣಾಮವಾಯಿತು.

2000 ಇಂಟರ್ನೆಟ್ ಆಧರಿತ ಕಂಪನಿಗಳ ಡಾಟ್ ಕಾಮ್ ಬಬಲ್ (.com) ಕೊನೆಗೊಂಡು, ಅಮೆರಿಕದ ನಾಸ್ಡಾಕ್ ಸೂಚ್ಯಂಕದಲ್ಲಿ ಭಾರಿ ಕುಸಿತ ಕಂಡುಬಂದಿತು.

# ಆರೋಗ್ಯ ಇಲ್ಲದಿದ್ದರೆ ಕೋಟಿಯಿದ್ದರೇನು ಫಲ..?

**ಚೇತನ್ ಗುರೂಜಿ**
**ಬಸವ ಯೋಗ ಕೇಂದ್ರ, ಅಡಗೂರು.**

ಕನ್ನಡ ಪೋಸ್ಟ್ ಹೆಲ್ತ್



ಮನುಷ್ಯ ದೇವರ ಹತ್ತಿರ ಏನಾದರೂ ಬೇಡಿಕೊಳ್ಳುವುದಿದ್ದರೆ ಅದು ಆರೋಗ್ಯ ಮಾತ್ರ. ನಾಲ್ಕೈದು ದಶಕಗಳ ಹಿಂದೆ ದೇವರನ್ನು ಬೇಡುತ್ತಿದ್ದುದು ಹಣ, ಅಂತಸ್ತು, ಆಸ್ತಿ ಗಳಿಸುವ ಶಕ್ತಿ ಕರುಣಿಸು ಎಂದು. ಕೇವಲ ಐವತ್ತು ವರ್ಷಗಳಲ್ಲಿ ಎಷ್ಟು ಬದಲಾಗಿದೆ ಎಂದರೆ ಜನರಿಗೆ ದುಡಿಮೆಯು ಇದೆ ದುಡ್ಡು ಇದೆ ಆರೋಗ್ಯ ಒಂದಿಲ್ಲ ಎಂಬಂತಾಗಿದೆ.

ಬದುಕಿರುವ ತನಕ ಆರೋಗ್ಯವೊಂದು ಕೊಟ್ಟುಬಿಡು ಸಾಕು ಅನ್ನುವಷ್ಟು ಮಟ್ಟಿಗೆ ಬಂದು ತಲುಪಿದ್ದೇವೆ.

ಸಕಲ ಸೌಲಭ್ಯ ಸವಲತ್ತುಗಳು ಸುಲಭವಾಗಿ ಸಿಗುತ್ತವೆ. ಈಗಂತೂ ಬ್ಯಾಂಕು ಮತ್ತು ಇತರೆ ಸಂಘ ಸಂಸ್ಥೆಗಳು ಸಾಲ ಸೌಲಭ್ಯಗಳನ್ನು ಕೊಡುತ್ತಿರುವುದರಿಂದ ಏನನ್ನು ಬೇಕಾದರೂ ಖರೀದಿಸುವ ಅವಕಾಶಗಳು ಸಿಗುತ್ತಿವೆ. ಅಂದರೆ ನಮ್ಮಲ್ಲಿ ಆರ್ಥಿಕ ಸ್ಥಿತಿ ಸುಧಾರಿಸಿದೆ. ಪ್ರಸ್ತುತ ಜನರು ಕೇಳುತ್ತಿರುವುದು ಆರೋಗ್ಯ. ಯಾರಿಗಾದರೂ ಕಾಯಿಲೆ ಬಂದಿದ್ದರೆ ಅವರು ಹೇಳುವುದು ಒಂದೇ ಆರೋಗ್ಯ ಕೊಡುವುದಿದ್ದರೆ ಹೇಳಿ ನಾನು ಗಳಿಸಿದ ಅರ್ಧ ಸಂಪತ್ತನ್ನು ಕೊಡುತ್ತೇನೆ ಎಂದು.

ಅಷ್ಟು ಅನಾರೋಗ್ಯದಿಂದ ದೈಹಿಕ ತೊಂದರೆ ಅನುಭವಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ ಇಂದಿನ ಬಹಳಷ್ಟು ಜನರು ಇದರಿಂದ ಹೊರಬರುವ ಯಾವುದಾದರೂ ದಾರಿ ಇದಿಯಾ ಎಂದು ಹುಡುಕುತ್ತಿದ್ದಾರೆ.

ಇತ್ತೀಚಿಗೆ ಪ್ರಚಲಿತವಿರುವ ಮಾತೆಂದರೆ ಹಣ ಕಳೆದುಕೊಂಡರೆ ಏನೂ ನಷ್ಟವಿಲ್ಲ, ಆಸ್ತಿ ಕಳೆದುಕೊಂಡರು ಏನು ತೊಂದರೆ ಇಲ್ಲ, ಅಧಿಕಾರ ಹೋದರು ಏನು ಆಗುವುದಿಲ್ಲ, ಆರೋಗ್ಯವನ್ನು ಕಳೆದುಕೊಂಡರೆ ಎಲ್ಲವನ್ನು ಕಳೆದುಕೊಂಡಂತೆ ಎಂಬುದು.

ಹಣ ಕಳೆದುಕೊಂಡರು ಸಂಪಾದಿಸಬಹುದು ಆಸ್ತಿ ಹೋದರು ಮತ್ತೆ ಗಳಿಸಬಹುದು ಅಧಿಕಾರ ಇಲ್ಲದಿದ್ದರೂ ಮತ್ತೆ ಅಧಿಕಾರ ಪಡೆಯಬಹುದು ಆರೋಗ್ಯವನ್ನು ಕೆಡಿಸಿಕೊಂಡರೆ ಮತ್ತೆ ಸರಿಪಡಿಸಿಕೊಳ್ಳಲು ಬಹಳಷ್ಟು ಕಷ್ಟವಾಗುತ್ತದೆ. ಅದಕ್ಕಾಗಿ ಆರೋಗ್ಯಕ್ಕೆ ಅಷ್ಟು ಮಹತ್ವವಿದೆ. ಹಾಗಾದರೆ ಆರೋಗ್ಯವೆಂದರೇನು ಅನ್ನುವ ಪ್ರಶ್ನೆ ಮೂಡುತ್ತದೆ. ದೇಹಕ್ಕೆ ರೋಗವಿಲ್ಲದ ಸ್ಥಿತಿಯೇ ಆರೋಗ್ಯವೇ. ಅಲ್ಲ ಹಾಗಾದರೆ ದೈಹಿಕ, ಮಾನಸಿಕ, ಸಾಮಾಜಿಕ, ಆಧ್ಯಾತ್ಮಿಕವಾಗಿ ಆರೋಗ್ಯದಿಂದಿರುವವರನ್ನು ನಿಜವಾದ ಆರೋಗ್ಯವಂತ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳುತ್ತದೆ.

ಅಂದರೆ ಒಬ್ಬ ಹುಚ್ಚ ದೈಹಿಕವಾಗಿ ಚೆನ್ನಾಗಿರುತ್ತಾನೆ, ಅವನನ್ನು ಆರೋಗ್ಯವಂತ ಎಂದು ಕರೆಯಲಾಗುವುದಿಲ್ಲ. ಮಾನಸಿಕವಾಗಿ ಸದೃಢರಾಗಿರುತ್ತಾರೆ ದೇಹ ಚೆನ್ನಾಗಿರುವುದಿಲ್ಲ ಇನ್ನೊಬ್ಬರು ದೇಹ ಮತ್ತು ಮನಸ್ಸು ಎರಡೂ ಚೆನ್ನಾಗಿರುತ್ತೆ ಸಮಾಜದ ಬಗ್ಗೆ ಕಳಕಳಿರುವುದಿಲ್ಲ. ಇನ್ನೊಂದಿಷ್ಟು ಜನರು ದೈಹಿಕ ಮಾನಸಿಕ ಸಾಮಾಜಿಕವಾಗಿ ಒಳ್ಳೆಯವರು ಇರುತ್ತಾರೆ. ಆದರೆ ಆಧ್ಯಾತ್ಮಿಕ ಆಲೋಚನೆಗಳು ಅವರಲ್ಲಿ ಇರುವುದಿಲ್ಲ. ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಇರುತ್ತಾರೆ. ಇಂಥವರನ್ನು ಆರೋಗ್ಯವಂತ ವ್ಯಕ್ತಿ ಎಂದು ಕರೆಯಲಾಗುವುದಿಲ್ಲ.

ಅನಾಲ್ಕು ರೀತಿಯಲ್ಲೂ ಚೆನ್ನಾಗಿದ್ದರೆ ಅವರನ್ನು ವಿಶ್ವ ಆರೋಗ್ಯ ಸಂಸ್ಥೆ ಹೇಳುತ್ತದೆ ಪರಿಪೂರ್ಣ ಆರೋಗ್ಯವಂತ ಎಂದು.

ನಮ್ಮಲ್ಲಿ ಗಾದೆ ಮಾತೊಂದಿದೆ ಆರೋಗ್ಯವಿಲ್ಲದ ಬಾಳು, ಎಷ್ಟಿದ್ದರೂ ಹಾಳು ಅಂದರೆ ಕೋಟಿ ಬೆಲೆಬಾಳುವ ಮನೆ, ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಾರು, ನೂರಾರು ಎಕರೆ ಜಮೀನು, ಮನೆ ತುಂಬಾ ಕೆಲಸ ಮಾಡುವಂತಹ ಜನರು ಹೀಗೆ ಸಕಲ ವ್ಯವಸ್ಥೆ ಇದ್ದರೇನು ಬಂತು ನಮ್ಮ ಆರೋಗ್ಯ ಚೆನ್ನಾಗಿಲ್ಲದಿದ್ದರೆ. ಹಿಂದಿನ ಹಿರಿಯರು ಹೇಳಿದ್ದು ಇದನ್ನೇ ಆರೋಗ್ಯವೇ ಭಾಗ್ಯ ಎಂದು ಯಾವತ್ತೂ ಸಹ ಸಿರಿತನ ಅಧಿಕಾರ ಅಂತಸ್ತು ಭಾಗ್ಯವೆಂದು ಹೇಳಲಿಲ್ಲಾ.

ಅವರಿಗೆ ಗೊತ್ತಿತ್ತು ಇದ್ಯಾವುದೂ ಸಹ ಭಾಗ್ಯವಲ್ಲ ಆರೋಗ್ಯವೇ ನಿಜವಾದ ಭಾಗ್ಯವೆಂದು. ಆರೋಗ್ಯವೊಂದು ಸರಿ ಇಲ್ಲದಿದ್ದರೆ ಏನನ್ನು ಅನುಭವಿಸಲು ಆಗುವುದಿಲ್ಲ. ಇನ್ನೊಂದಿಷ್ಟು ಜನರು ಹಣವಿದ್ದರೆ ಆರೋಗ್ಯ ಪಡೆಯಬಹುದು ಎಂದುಕೊಳ್ಳುತ್ತಾರೆ. ಗೊತ್ತಿರಲಿ ಹಣದಿಂದ ಔಷಧಿ ತರಬಹುದೇ ಹೊರತು ಆರೋಗ್ಯವನ್ನು ಅಲ್ಲ.

ಆರೋಗ್ಯ ಎಷ್ಟು ಮುಖ್ಯ ಎಂಬುದು ಯಾರಿಗೆ ಗೊತ್ತಿರುತ್ತೆ ಎಂದರೆ ಆರೋಗ್ಯವನ್ನು ಕಳೆದುಕೊಂಡವನಿಗೆ ಇದರ ಮಹತ್ವ ಬಹಳ ಚೆನ್ನಾಗಿ ಗೊತ್ತಾಗುತ್ತದೆ. ಅಷ್ಟರಲ್ಲಾಗಲೇ ಅವರ ಸಂಪೂರ್ಣ ಆರೋಗ್ಯ ಸ್ಥಿತಿ ಹದಗೆಟ್ಟು ಹೋಗಿರುತ್ತದೆ. ಸರಿಪಡಿಸುವುದು ಕಷ್ಟವಾಗುತ್ತದೆ ನಾವುಗಳು ಬಹಳ ಜನರ ಜೀವನದ ಅನಾರೋಗ್ಯದ ಕಹಿ ಘಟನೆಗಳನ್ನ ನೋಡುತ್ತೇವೆ ಮತ್ತು ಕೇಳಿರುತ್ತೇವೆ ಆದರೂ ಮರೆತೇ ಬಿಡುತ್ತೇವೆ.

ಏಕೆಂದರೆ ಭಾರತೀಯರಾದ ನಾವು ಸ್ಮಶಾನ ವೈರಾಗಿಗಳು ತತ್ ಕ್ಷಣದಲ್ಲಿ ಹೌದು ಆರೋಗ್ಯಕ್ಕೆ ಬಹಳ ಮಹತ್ವವನ್ನ ಕೊಡಬೇಕೆಂದು ಆ ಕ್ಷಣದಲ್ಲಿ ಅಂದುಕೊಳ್ಳುತ್ತೇವೆ ಆನಂತರ ಕೆಲವೇ ಗಂಟೆಗಳಲ್ಲಿ ಮರೆತು ನಮ್ಮದೇ ದುಡಿಮೆಯಲ್ಲಿ ತೊಡಗಿಕೊಳ್ಳುತ್ತೇವೆ.

ನಾಲ್ಕೈದು ವರ್ಷಗಳ ಹಿಂದೆ ಒಬ್ಬ ವ್ಯಕ್ತಿ ತೀರಿಕೊಳ್ಳುತ್ತಾರೆ

ಅವರೇ ರಾಕೇಶ್ ಜಂಜೂನ್ವಾಲ ಕೇವಲ 40 ವರ್ಷಗಳಲ್ಲಿ 40,000 ಕೋಟಿ ಗಳಿಸಿದಂತಹ ವ್ಯಕ್ತಿ 60ನೇ ವಯಸ್ಸಿಗೆ ಮರಣ ಹೊಂದುತ್ತಾರೆ. ಆದರೆ ಹತ್ತಾರು ವರ್ಷಗಳ ಕಾಲ ಲಿವರ್ ಸಮಸ್ಯೆ ಮತ್ತು ಕಾಲುಗಳ ಸ್ವಾಧೀನ ಕಳೆದುಕೊಂಡು ಯಾತನೆ ಅನುಭವಿಸಿ ಹಾಸಿಗೆಯ ಮೇಲೆ ಮಲಗಿಕೊಂಡೆ ಹಲವಾರು ವರ್ಷಗಳ ಕಾಲ ಬದುಕಿದ್ದು ಒಂದು ಸಾರಿ ಪ್ರಧಾನಮಂತ್ರಿಗಳ ಜೊತೆ ವೇದಿಕೆಯಲ್ಲಿ ಭಾಗವಹಿಸಿದ ಸಂದರ್ಭ ಎದ್ದುನಿಂತು ನಮಸ್ಕರಿಸಲು ಆಗದಂತಹ ಸ್ಥಿತಿಯಲ್ಲಿ ಬದುಕಿದರು. ಒಂದು ಕಾರ್ಯಕ್ರಮದ ವೇದಿಕೆಯಲ್ಲಿ ತಮ್ಮ ಅನುಭವವನ್ನು ಹಂಚಿಕೊಳ್ಳುವ ಸಂದರ್ಭ ಅವರು ಹೇಳುತ್ತಾರೆ. ನಿಮ್ಮೆಲ್ಲರಿಗೂ ನಾನು ಯಶಸ್ವಿಯಾಗಿದ್ದೇನೆ ಎಂದು ಅನಿಸಬಹುದು. ಆದರೆ ಹಣ ಸಂಪಾದನೆಯಲ್ಲಿ ಮಾತ್ರ ಆರೋಗ್ಯ ಮತ್ತು ಕುಟುಂಬ ವಿಚಾರದಲ್ಲಿ ಅಲ್ಲ. ಅಂದರೆ ಅಷ್ಟು ಅವರಿಗೆ ಅನಾರೋಗ್ಯದ ಅನುಭವ ಆಗಿರುತ್ತದೆ ಕೊನೆಗೆ ಅವರು ಒಂದು ಮಾತನ್ನು ಹೇಳುತ್ತಾರೆ. ನೀವಾದರೂ ಆರೋಗ್ಯಕ್ಕೆ ಪ್ರಾಧಾನ್ಯತೆ ಕೊಡಿ ನಂತರ ಕುಟುಂಬ ಆ ಮೇಲೆ ಹಣ ಸಂಪಾದನೆ ಮಾಡಿ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಇತ್ತೀಚಿಗೆ ಖ್ಯಾತ ಸಿನಿಮಾ ನಟರಾದ ರಜನಿಕಾಂತ್ ಅವರು ಸಹ ಅಭಿಮಾನಿಗಳಿಗೆ ನೀವು ಚೆನ್ನಾಗಿ ಬದುಕಬೇಕೆಂದರೆ ಮೊದಲು ಆರೋಗ್ಯಕ್ಕೆ ಬಹಳ ಮಹತ್ವವನ್ನ ಕೊಡಬೇಕೆಂದು ನನ್ನ ಸಲಹೆ ಎಂದು ಹೇಳಿದರು.

ಮತ್ತೊಬ್ಬರಾದ ಖ್ಯಾತ ಗಾಯಕಿ ಶ್ರೀಮತಿ ಲತಾ ಮಂಗೇಶ್ವರ್ ಅವರು ಸಹ ಒಂದು ಮಾತನ್ನು ಹೇಳಿದ್ದಾರೆ. ನನ್ನ ಹತ್ತಿರ ಸಾವಿರಾರು ಬೆಲೆಬಾಳುವ ಸೀರೆಗಳಿದೆ ಆದರೆ ಈಗ ಆಸ್ಪತ್ರೆಯವರು ಕೊಟ್ಟಿರುವ ಒಂದು ಗೌನ್ ಧರಿಸಿದ್ದೇನೆ.

ಹತ್ತಾರು ಕಾರುಗಳಿದ್ದಾವೆ ನಾನೀಗ ಗಾಲಿ ಕುರ್ಚಿಯಲ್ಲಿ ಓಡಾಡುತ್ತಿದ್ದೇನೆ ನಿಮಗೆಲ್ಲರಿಗೂ ಹೇಳುವುದಿಷ್ಟೇ ಆರೋಗ್ಯವನ್ನು ಚೆನ್ನಾಗಿಟ್ಟುಕೊಳ್ಳಿ ಎಂದು. ಹೀಗೆ ದೊಡ್ಡ ದೊಡ್ಡ ನಟರು, ಶ್ರೀಮಂತರು, ಹೇಳಿದ ಅನುಭವದ ಮಾತುಗಳಿಂದ ಆದರೂ ನಾವುಗಳು ಬದಲಾಗಬೇಕು.

ಆರೋಗ್ಯವೇ ಸಕಲ ಸಂಪತ್ತು ಎಂಬ ಅರಿವು ಈ ಲೇಖನ ಓದಿದ ಮೇಲೆ ಬಂದರೆ ಸಾರ್ಥಕವಾದೀತು ಏನಂತೀರಿ?

ಇಲ್ಲವಾದರೆ ಅದರ ಪರಿಣಾಮಗಳನ್ನ ಅನುಭವಿಸಿಕೊಂಡು ಜೊತೆಗೆ ಸಂಬಂಧಿಕರಿಗೂ ತೊಂದರೆ ಕೊಟ್ಟುಕೊಂಡು ಜೀವಿಸಬೇಕಾಗುತ್ತದೆ.

ಒಂದು ಗೃಹ ಸುಂದರವಾಗಿರಬೇಕಾದರೆ ಮನೆಯೊಳಗಿರುವ ಬೆಲೆಬಾಳುವ ವಸ್ತುಗಳಿಂದಲ್ಲ ಅಲ್ಲಿ ವಾಸಿಸುವ ಜನರು ಎಷ್ಟು ಆರೋಗ್ಯದಿಂದಿದ್ದಾರೆ ಎಂಬುದರಿಂದ ಮನೆಯ ಸೌಂದರ್ಯ ಹೆಚ್ಚಾಗುತ್ತದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248